ಸಿ.ಸಿ.ನಂ.17/2022
ಪಿ.ಡಬ್ಲ್ಯೂ-1
ಸಿ.ಡಬ್ಲ್ಯೂ-1

ದಿನಾಂಕ.09-06-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೆ ಕರಿಸಲಾಯಿತು.

**ಮುಂದುವರಿದ ಪಾಟಿ ಸವಾಲುಃ ಆರೋಪಿಗಳ** ಪರ ಶ್ರೀ ಎನ್ ಆರ್ ಎನ್ . ವಕೀಲರಿಂದಃ

39 . ದಿನಾಂಕಃ 20-08-2021 ರಂದು ನನ್ನ ಹೇಳಿಕೆ ನೀಡಿರುತ್ತೇನೆ. ಉಳಿದ ಸಿಬ್ಬಂದಿಗಳು ನನ್ನ ಸಮಕ್ಷಮ ಹೇಳಿಕೆ ಕೊಟ್ಟಿಲ್ಲ. ನನ್ನ ಸದ್ರಿ ಹೇಳಿಕೆಯನ್ನು ಕೈ ಬರಹದಲ್ಲಿ ಬರೆದಿರುತ್ತೇನೆ. ಸಾಕ್ಷಿ ಸದ್ರಿ ಹೇಳಿಕೆಯಲ್ಲಿ ಹೇಳಿರುವ, "ನಾಗೇಂದ್ರ ಕನ್ನಯ ಗೌಡ ದಾರಿಯಲ್ಲಿ ಸಿಕ್ಕಿದಾಗ ಅತನನ್ನು ವಿಚಾರಿಸಲಾಗಿ " ನ್ನು ಓದಿ ಹೇಳಲಾಗಿ ಒಪ್ಪಿರುತ್ತಾರೆ. ಆದ್ದರಿಂದ ಆ ಹೇಳಿಕೆಯ ಆ ಭಾಗವನ್ನು ನಿಡಿ -1 ಎಂದು ಗುರುತಿಸಲಾಯಿತು. ಬಂಡೆಯಲ್ಲಿ ಮಲಗಿದ್ದವನನ್ನು ಹಿಡಿದು ವಿಚಾರಿಸಿದ್ದು ಎಂದು ಹೇಳಿರುವುದು ಸರಿಯೋ ಹಾಗೂ ನಿಡಿ-1 ಹೇಳಿಕೆ ಸರಿಯೋ ಎಂದರೆ ಸಾಕ್ಷಿ ಬಂಡೆಯ ಮೇಲೆ ಮಲಗಿದವನ್ನು ಹಿಡಿದು ವಿಚಾರಿಸಿದ್ದು ಎಂದು ಹೇಳಿರುವುದು ಸರಿ ಇರುತ್ತದೆ. ಬಂಡೆಯ ಮೇಲೆ ಮಲಗಿದವನು ನಾವು ಹಿಡಿದಿದ್ದೇ ಆದರೆ 1 ವರ್ಷ ಕಳೆದ ನಂತರ ಕೂಡಾ ನೆನಪು ಇರುತ್ತದೆ ಎಂದರೆ ಸರಿ. ನಾನು ಸಲ್ಲಿಸಿದ ದೂರಿನ ಜೊತೆ ಪಾರ್ಮ ನಂ 20 ಕೂಡಾ ಲಗತ್ತಿಸಿದೆನೆಂದರೆ ಸರಿ. ಆ ದೂರನ್ನು ಸಲ್ಲಿಸುವ ಮುನ್ನ ಸರಿಯಾಗಿ ಪರಿಶೀಸಿದ್ದೇನೆ. ಆ ದೂರಿನನಲ್ಲಿ ದೂರು ಮತ್ತು ಫಾರ್ಮ ನಂ 20 ರಲ್ಲಿ ಇಂಟೆಸ್ಟೈನ್ ಕೂಡಾ ವಶಪಡಿಸಲಾಗಿದೆ ಎಂದು ಹೇಳಿದ್ದೇನೆ ಎಂದು ಅವುಗಳನ್ನು ತೋರಿಸಿ ಹೇಳಿದಾಗ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ದೂರಿನಲ್ಲಿರುವ ಸದ್ರಿ ಭಾಗವನ್ನು ನಿಡಿ -2 ಎಂದು ಹಾಗೂ ಪಾರ್ಮ 20 ರಲ್ಲಿರುವ ಆ ಭಾಗವನ್ನು ನಿ ಡಿ -3 ಎಂದು ಗುರುತಿಸಲಾಯಿತು.

40. ನವಗದ್ದೆಯಲ್ಲಿ ಪಶುವೈದ್ಯರ ಸಮಕ್ಷಮ ಮಾಂಸ ಮತ್ತು ಬುಲೆಟ್ ಹೋಗಿದ್ದ ಚರ್ಮ ಹಾಗೂ ಇನ್ನೊಂದು ಚರ್ಮ ಮಾದರಿಯಾಗಿ ತೆಗೆದೆವು. ಪಂಚನಾಮೆಯಲ್ಲಿ ಆ ರೀತಿಯ ಎರಡು ರೀತಿಯ ಚರ್ಮಗಳನ್ನು ಮಾದರಿಯಾಗಿ ತೆಗೆದೆವು ಎಂದು ಹೇಳಿಲ್ಲ. ಆ ಚರ್ಮದ ಮಾದರಿಗಳನ್ನು ಚರ್ಮದ ಯಾವ ಭಾಗದಿಂದ ತೆಗೆದೆವು ಎಂದು ಹೇಳಿಲ್ಲ. ಆ ರೀತಿ ಚರ್ಮದ ಮಾದರಿಗಳನ್ನು ತೆಗೆದುಕೊಂಡಿಂದ್ದೇವೆ ಎಂದು ಹೇಳಿದ ನಂತರ ಪೋಟೋ ತೆಗೆದೆವೊ ಎಂದರೆ ಸಾಕ್ಷಿ ಮೊದಲು ಪೋಟೋ ತೆಗೆದೆ , ನಂತರ ತೆಗೆದೆವೊ ಎಂದು ನನಗೆ ಈಗ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಮಾದರಿ ಚರ್ಮಗಳ ಪೈಕಿ 1 ಹೊಟ್ಟೆಯ ಭಾಗದ ಹಾಗೂ ಇನ್ನೊಂದು ಹಿಂದುಗಡೆ ತೊಡೆಯ ಭಾಗದ ಚರ್ಮಗಳಾಗಿತ್ತು. ಮಾದರಿ ತೆಗೆದ ನಂತರ ಪೋಟೊ ತೆಗೆದಿದಿರುವುದು ನೆನಪಿಲ್ಲ. ಹಿಂದಿನ ಕಾಲಿನ ತೊಡೆಯ ಭಾಗಕ್ಕೆ ಗುಂಡು ತಗಲಿದ ಭಾಗವನ್ನು ಮಾದರಿ ತೆಗೆಯಲಾಯಿತು.

41. ನಿಪಿ–11 ರ ಪೋಟೊ ವನ್ನು ಅಮಾನತ್ತು ಪಡಿಸಿದಾಗ ತೆಗೆದ ಪೋಟೊ. ಅದರಲ್ಲಿ ಕಾಣುವವರು ನಮ್ಮ ಇಬ್ಬರು ಮೇಲಾಧಿಕಾರಿಗಳು. ಅವರ ಪೈಕಿ ಒಬ್ಬರ ಹೆಸರು ಸುರೇಶ ರಾಮಾ ನಾಯ್ಕ ಹಾಗೂ ಇನ್ನೊಬ್ಬರು ಮಹಿಳೆ ಯಾಗಿದ್ದು ಅವರ ಹೆಸರು ಗೊತ್ತಿಲ್ಲ. ಆ ಮಹಿಳೆಯ ಸಹಿಗಳನ್ನು ಯಾವುದೇ ದಾಖಲೆಗೆ ಪಡೆದಿಲ್ಲ. ನಿಪಿ–11 ರಲ್ಲಿ ಕಾಣುತ್ತಿದೆ ಎಂದು ತೋರುವ ಭ್ರೂಣದ ಮೇಲೆ ಮೇಣದ ರೀತಿಯ ದ್ರವ ಕಾಣುತ್ತದೆ ಎಂದರೆ ಸರಿ. ನಿಪಿ–17 ರಲ್ಲಿ ಚರ್ಮವನ್ನು ತುಂಡು ಮಾಡಿರುವುದು ಕಾಣುತ್ತಿಲ್ಲ ಎಂದರೆ ಸರಿಯಲ್ಲ, ಅದರಲ್ಲಿ ಕಾಲಿನ ಭಾಗವನ್ನು ತುಂಡು ಮಾಡಿರುವುದು ಅದರಲ್ಲಿ ಕಾಣುವ ದೊಡ್ಡ ಚರ್ಮದ ಎಡಭಾಗಕ್ಕೆ ಬಾಲದಂತೆ ಕಾಣುವ ಕೆಳಭಾಗದಲ್ಲಿ ಎಮ್ ರೀತಿ ಇರುವ ಭಾಗ ಎಂದು ಸಾಕ್ಷಿ ತೋರಿಸುತ್ತಾರೆ. ಪ್ರತಿಯೊಂದು ಭಾಗಗಳನ್ನು ಪ್ರತ್ಯೇಕವಾಗಿ ಇಟ್ಟು ಪಂಚರಿಗೆ

ತೋರಿಸಿ ಅವುಗಳನ್ನು ಪಂಚರು ಹಾಗೂ ಸಿಬ್ಬಂದಿಗಳು ನೋಡುತ್ತಿರುವುದು ಮತ್ತು ಅದನ್ನು ಪ್ರತ್ಯೇಕವಾಗಿ ಸುಡುತ್ತಿರವುದನ್ನು ಪೋಟೊ ತೆಗೆದಿದ್ದೀರಾ ಎಂದರೆ ಸಾಕ್ಷಿ ಅದಕ್ಕೆ ನಿಪಿ–23 ಮತ್ತು ನಿಪಿ–24 ಆ ಬಗ್ಗೆ ಪೋಟೊಗಳು ಎಂದು ನುಡಿಯುತ್ತಾರೆ. ನಿಪಿ–23 ಮತ್ತು 24 ರಲ್ಲಿ ಚರ್ಮ, ಕಾಲುಗಳು, ತಲೆ ಹಾಗೂ ಮಾಂಸ ಪ್ರತ್ಯೇಕವಾಗಿ ಹಾಗೂ ಸ್ಪಷ್ಟವಾಗಿ ಕಾಣುತ್ತಿಲ್ಲ ಎಂದರೆ ಸರಿ. ನಿಪಿ–26 ರಲ್ಲಿ ಸುಡಲಾಯಿತು ಎಂದು ಹೇಳುವ ಮಾಂಸ ಮತ್ತು ಚರ್ಮ ಕಡವೆಯ ಯಾವ ಭಾಗದ್ದು ಎಂದು ಹೇಳಿಲ್ಲ.

42. 5 ರಿಂದ 10 ಗ್ರಾಂ ನಷ್ಟು ಮಾಂಸವನ್ನು ನನ್ನ ಮುಂದೆ ಮಾದರಿ ತೆಗೆಯಲಾಯಿತು. 2 ನನ್ನ ಪ್ರಕಾರ 2 ಮಾದರಿಗಳ ಪೈಕಿ 1 ಮಾದರಿ ಮಾಂಸವನ್ನು ಚೀಲದಲ್ಲಿ ಸಿಕ್ಕಿದ ಮಾಂಸದಿಂದ ಹಾಗೂ ಇನ್ನೊಂದು ಮಾದರಿಯನ್ನು ತಲೆಯ ಭಾಗದಿಂದ ತೆಗೆಯಲಾಗಿದೆ. ಪಂಚನಾಮೆಯಲ್ಲಿ ಮತ್ತು ಪಶು ವೈಧ್ಯ ರ ವರದಿಯಲ್ಲಿ ತಲೆ ಭಾಗದ ಹಾಗೂ ಚೀಲದಲ್ಲಿ ಸಿಕ್ಕಿದ ಎನ್ನಲಾದ ಮಾಂಸದಿಂದ ಆ 2 ಮಾದರಿಗಳನ್ನು ತೆಗೆಯಲಾಯಿತು ಎಂದು ಹೇಳಿಲ್ಲ. ನನ್ನ ಹೇಳಿಕೆಯಲ್ಲಿ ಕೂಡ ತಲೆ ಭಾಗದ ಹಾಗೂ ಚೀಲದಲ್ಲಿ ಸಿಕ್ಕಿದ ಎನ್ನಲಾದ ಮಾಂಸದಿಂದ ಆ 2 ಮಾದರಿಗಳನ್ನು ತೆಗೆಯಲಾಯಿತು ಎಂದು ಹೇಳಿಲ್ಲ ಹಾಗೂ ಮಾನ್ಯ ನ್ಯಾಯಾಲಯದಲ್ಲಿ ಪ್ರಪ್ರಥಮವಾಗಿ ಹೇಳುತ್ತಿರುವುದು ಎಂದರೆ ಸರಿ.

43. ಕರುಳಿನ ಭಾಗವನ್ನು ಸುಟ್ಟಿದ್ದೆವೆ . ತನಿಖಾಧಿಕಾರಿಗೆ ನಾನು ಹೇಳಿದಂತಹ ಚೀಲದಲ್ಲಿ ಇದ್ದ ಮಾಂಸದಿಂದ ಮಾದರಿ ತೆಗೆಯಲಾಯಿತು ಎಂದು ಹೇಳಿರುತ್ತೇನೆ. ಸ್ವಖುಶಿ ಹೇಳಿಕೆಯನ್ನು ರಾತ್ರಿ 7 ಗಂಟೆಗೆ ನನ್ನ ಸಮಕ್ಷಮ ಬೇರೆ ಸಿಬ್ಬಂದಿ ದಾಖಲಸಿರುತ್ತಾರೆ. ರಾತ್ರಿ 7 ರಿಂದ 8 ಗಂಟೆಯ ಒಳಗೆ ಆರೋಪಿಗಳ ಸಹಿಯನ್ನು ಅದಕ್ಕೆ ಪಡಿಯಲಾಗಿದೆ. ಬಿ ಡಿ ಗೌಡ ರವರ ತೋಟದಲ್ಲಿ ಗನ್

ತೆಗದುಕೊಳ್ಳುವಾಗ ಪಂಚಾನಾಮೆ ಮಾಡಿದೆವು. ಆ ಗನ್ ಸಿಕ್ಕಿತ್ತು ಎನ್ನಲಾದ ಸ್ಥಳದ ಚೆಕ್ಬಂದಿ ಪಂಚನಾಮೆಯಲ್ಲಿ ಬರೆದಿಲ್ಲ. ಮಾದರಿಗಳನ್ನು ನವಂಬರ್ ತಿಂಗಳ ತನಕ ನಮ್ಮ ಕಚೇರಿಯಲ್ಲಿ ಇಟ್ಟಿದ್ದೆವೆ. ಮಾದರಿಗಳನ್ನು ಕಚೇರಿಯಲ್ಲಿ ಇರಿಸಿಕೊಳ್ಳಲು ಮಾನ್ಯ ನ್ಯಾಯಾಲಯದಿಂದಅನುಮತಿ ಪಡೆದಿಲ್ಲ. ವಶಪಡಿಸಿಕೊಂಡ ವಸ್ತುಗಳನ್ನು ಸೂಕ್ತ ಭದ್ರತೆಯಲ್ಲಿ ಇಟ್ಟು ಕೊಳ್ಳಬೇಕು ಎಂದು ನನಗೆ ಗೊತ್ತಿದೆ. ಪ್ರತಿಯೊಂದು ಪಂಚನಾಮೆಗೂ ನಮ್ಮ ಇಲಾಖೆಯ 2 ಸಿಬ್ಬಂದಿಗಳನ್ನು ಮಾತ್ರ ಉಪಯೋಗಿಸಿದ್ದೇವೆ ಎಂದರೆ ಸರಿ. ಸಾರ್ವಜನಿಕರನ್ನು ಪಂಚರಾಗಿ ಸಹಕರಿಸಲು ನಾವು ಕರೆದಿಲ್ಲ.

44. ಸರ್ಚ್ ವಾರಂಟ್ ನ್ನು ನ್ಯಾಯಾಲಯದಿಂದ ಮನೆ ತಪಾಸಣೆಗೆ ಪಡೆಯಬೇಕು ಎಂಬುದು ನನಗೆ ಗೊತ್ತಿದೆ. ಸರ್ಚ್ ವಾರಂಟ್ ಪಡೆದುಕೊಂಡು ಮನೆಯನ್ನು ಪರಿಶೀಲಸಿಸಲು ಅದಕ್ಕಿಂತ ಮುಂಚೆ ಪಂಚಾಯತನಿಂದ ಮನೆ ನಂಬರ ಕೇಳಿ ತಿಳಿದು ಕೊಂಡಿಲ್ಲ. ಮನೆಗೆ ತಪಾಸಣೆಗೆ ಹೋದ ಬಗ್ಗೆ ಮನೆಯ ಒಳಗಡೆ ಪಂಚನಾಮೆ ಮಾಡಿಲ್ಲ. ಮನೆಯಲ್ಲಿ ಆ ದಿನ ಯಾರು ಯಾರು ವ್ಯಕ್ತಿಗಳು ಇದ್ದರು ಎಂದರೆ ಸಹಿ ಪಡೆದಿಲ್ಲ. ಮನೆಯಲ್ಲಿದವರು ಸರ್ಚ್ ವಾರಂಟ್ ಜಾರಿ ಮಾಡಿ ಸಹಿ ಪಡೆದು ನಂತರ ಮನೆ ಒಳಗಡೆ ಹೋಗಬೇಕಾಗುತ್ತದೆ ಎಂದರೆ ಸರಿ.

45. ಆರೋಪಿಗಳ ಉಗುರಿನ ಮಾದರಿಗಳನ್ನು ಸಂಗ್ರಹಿಸಲಾಯಿತು ಎಂದು ಹೇಳುವ ಸಮಯಲ್ಲಿ ನಾನು ಇರಲಿಲ್ಲ, ನಮ್ಮ ಸಿಬ್ಬಂದಿಗಳು ಇದ್ದರು. ಆ ಸಮಯದಲ್ಲಿ ಪಂಚನಾಮೆ ಮಾಡಿಲ್ಲ. ಮು.ಮಾ. -7 ರಿಂದ 9 ಆರೋಪಿಗಳಿಗೆ ಸಂಬಂಧಪಟ್ಟ ಉಗುರಿನ ಮಾದರಿಗಳಲ್ಲ ಹಾಗೂ ಈ ಪ್ರಕರಣಕ್ಕಾಗಿ ನಾನು ಹಾಗೂ ನನ್ನ ಮೇಲಧಿಕಾರಿಗಳು ಸೃಷ್ಟಿಸಿದವುಗಳು ಎಂದರೆ ಸರಿಯಲ್ಲ. ನವಗದ್ದೆ ಅರಣ್ಯ

ಪ್ರದೇಶಕ್ಕೆ ನನ್ನನ್ನು ಬಿಟ್ಟು ಬೇರೆ ಸಿಬ್ಬಂದಿಗಳು ಅಥವಾ ಮೇಲಧಿಕಾರಿಗಳು ನಾನು ಹೇಳುವಂತಹ ಮಾಂಸಗಳನ್ನು ಹಾಗೂ ಮಾದರಿಗಳನ್ನು ಪಡೆದಿಲ್ಲ. ಭ್ರೂಣದ ಮಾದರಿಗಳನ್ನು ಪಡೆಯಲು ನಾನು ಪಶು ಅಧಿಕಾರಿಗೆ ಹೇಳಿಲ್ಲ. ಭ್ರೂಣದ ಮಾದರಿಯನ್ನು ಪಡೆದಿಲ್ಲ. ಕಾಲುಗಳಿಗೆ ಸಂಬಂಧಪಟ್ಟಂತಹ ಮಾದರಿಗಳನ್ನು ಪಡೆದಿಲ್ಲ. ಪಂಚನಾಮೆಯಲ್ಲಿ 2 ಮಾಂಸದ ಮಾದರಿಗಳನ್ನು ಸಂಗ್ರಹಿಸಲಾಯಿತು ಎಂದು ಹೇಳಿಲ್ಲ. ರಕ್ತದ ಹಾಗೂ ಕೂದಲಿನ ಮಾದರಿಗಳನ್ನು ಕೂಡ ಸಂಗ್ರಹಿಸಲಾಯಿತು ಎಂದು ಪಂಚನಾಮೆಯಲ್ಲಿ ಹೇಳಿಲ್ಲ. ಆ ಎಲ್ಲ ಮಾದರಿಗಳನ್ನು ನನ್ನ ಸಮಕ್ಷಮ ಮೇಲಾಧಿಕಾರಿಗಳು ಸಂಗ್ರಹಿಸಿಲ್ಲ. ಗನ್‌ನ ಮೇಲೆ ಲೈಸನ್ಸ್ ಬಂದೂಕು ಆಗಿದಲ್ಲಿ ನಮಾದು ಆ ಬಗ್ಗೆ ಇರುತ್ತದೆ ಎಂದರೆ ಸರಿ. ಗನ್ ನ್ನು 15 ದಿವಸ ಅಥವಾ ಅದಕ್ಕಿಂತ ಮೇಲ್ಪಟ್ಟು ದಿನ ಉಪಯೋಗಿಸದೆ ಇಟ್ಟಾಗ ಅದರ ಬ್ಯಾರಲ್ ಒಳಗಡೆ ತುಕ್ಕು ಹಿಡಿಯುತ್ತದೆ ಎಂದರೆ ಸರಿ. ಅದರಲ್ಲಿ ತುಕ್ಕು ಹಿಡಿದಿತ್ತಾ ಅಥವಾ ಇಲ್ಲವಾ ಎಂದು ಆ ಗನ್ ನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಮುಂಚೆ ನಾನು ಪರಿಶೀಲಸಿಲ್ಲ . ಆ ಗನ್ ಗೆ ಮದ್ದು ತುಂಬಿ ಅದರ ಮೇಲೆ ತೆಂಗಿನ ಸಿಪ್ಪೆ ಕತ್ತನ್ನು ಹಾಕಿ ಮತ್ತೆ ಗುಂಡು ತುಂಬಿ ಪುನಃ ತೆಂಗಿನ ಸಿಪ್ಪೆ ಕತ್ತನ್ನು ತುಂಬಿ ಪ್ಯಾಕ್ ಮಾಡುವುದು ಎಂದರೆ ಸರಿ. ಮಹಜರಿನಲ್ಲಿ ಆ ರೀತಿ ಪ್ಯಾಕ್ ಇದ್ದ ಬಗ್ಗೆ ಹಾಗೂ ಆ ಪ್ಯಾಕ್ ನ್ನು ತೆಗೆದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ಆ ಪ್ಯಾ ಕ್ ನ್ನು ತೆಗೆದಾಗ ಅವುಗಳು ಪ್ರತ್ಯೇಕ ಪ್ರತ್ಯೇಕವಾಗಿ ಹೊರಗೆ ಬರುವುದಿಲ್ಲ ಆ ಮೂರು ವಸ್ತುಗಳು ಮಿಶ್ರಣವಾಗಿಯೇ ಬರುತ್ತದೆ ಎಂದರೆ ಸರಿ.

46. ಆರೋಪಿಗಳ ನ್ನು ವಶಕ್ಕೆ ಪಡೆದಾಗ ಅವರ ಕೈ ಹಾಗೂ ಉಗುರಿನ ರಕ್ತ ಕಲೆಗಳು ಇರಲಿಲ್ಲ. 1 ನೇ ಆರೋಪಿಯ ಬಟ್ಟೆಯ ಮೇಲೆ ಹಾಗೂ ಕೈ ಗಳ ಮೇಲೆ ರಕ್ತ ಕಲೆ ಹಾಗೂ ಚಿಕ್ಕ ಚಿಕ್ಕ ಮಾಂಸದ ಚೂರುಗಳು ಕಂಡುಬಂದಿರುವುದಿಲ್ಲ. ಈ ಉಗುರುಗಳ ತುಂಡುಗಳ ಆಧಾರದ ಮೇಲೆ ಆ

ಉಗುರುಗಳು ಯಾರ ಉಗುರುಗಳು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ಆರೋಪಿಗಳ ಉಗುರು ಮಾದರಿಗಳು ತೆಗೆದುಕೊಳ್ಳಲಾಯಿತು ಎಂದು ಹೇಳುವ ಸಮಯದಲ್ಲಿ ಅವರ ಬೆರಳುಗಳ ಉದ್ದವನ್ನು ಹಾಗೂ ಉಗುರುಗಳಿರುವ ಪ್ರದೇಶದ ಬೆರಳಿನ ಅಗಲವನ್ನು ಅಳತೆ ಮಾಡಿ ಅವರ ವರದಿಯಲ್ಲಿ ನಮೂದಿಸಿ ನನ್ನ ಜೊತೆ ಕಳುಹಿಸಿಲ್ಲ. ವೈದ್ಯಾಧಿಕಾರಿಯವರು ಉಗುರುಗಳ ಮಾದರಿ ಜೊತೆ ಅವರ ಅಭಿಪ್ರಾಯ ಬರೆದು ಕಳುಹಿಸಿಕೊಟ್ಟಿಲ್ಲ. ಆರೋಪಿಗಳ ಉಗುರು ಮಾದರಿಗಳನ್ನು ಸಂಗ್ರಹಿಸಲು ಆರೋಪಿಗಳ ಸಮ್ಮತಿ ಪಡೆದ ಬಗ್ಗೆ ದಾಖಲೆಯನ್ನು ಕೂಡ ಕಳುಹಿಸಿಕೊಟ್ಟಿಲ್ಲ.

47. ಗುಂಡು ತಗಲಿತ್ತು ಎಂದು ಹೇಳುವ ಮಾದರಿ ಚರ್ಮದ ಸುಮಾರು ಅರ್ಧ ಫೀಟ್ ಉದ್ದ ಮತ್ತು ಅಗಲ ಇತ್ತು. ಇನ್ನೊಂದು ಮಾದರಿ ಚರ್ಮ 10 ರಿಂದ 15 ಸೆಂ ಮೀ ಉದ್ದ ಮತ್ತು ಅಗಲ ಇತ್ತು. ಮಾದರಿ ಚರ್ಮ ಗಳನ್ನು ತೆಗೆದಾಗ ಆ ಚರ್ಮಗಳು ಹಸಿ ಇತ್ತು. ಅದನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸುವಾಗ ಒಣಗಿಸಿ ಕಳುಹಿಸಲಾಯಿತು. ಮಾದರಿ ತೆಗೆದು ಮೊಹರು ಮಾಡಿ ಪ್ಯಾಕ್ ಮಾಡಿದಾಗ ಪಂಚರು ಅದಕ್ಕೆ ಸಹಿ ಮಾಡಿರುತ್ತಾರೆ. ಸದರಿ ಮಾದರಿಯನ್ನು 3 – 4 ದಿನಗಳು ಒಣಗಿಸಿದೆವು. ಕಡವೆ ಚರ್ಮ ಕಂದು ಬಣ್ಣದಾಗಿರುತ್ತದೆ ಎಂದರೆ ಸರಿ. ಜಿಂಕೆಯ ಚರ್ಮ ಬಿಳಿ ಮಿಶ್ರಿತ ಚುಕ್ಕೆ ಗಳು ಹೊಂದಿರುತ್ತದೆ ಎಂದರೆ ಸರಿ. ಮಾಂಸಗಳಾಗಲೀ ಅಥವಾ ಚರ್ಮಗಳಾಗಲೀ ಒಣಗಿಸಲು ಉಪ್ಪಿನ ದ್ರಾವಣದಲ್ಲಿ ಅದ್ದಿ ಒಣಗಿಸಲಾಗುತ್ತದೆ ಎಂದರೆ ಸರಿ. ಇಲ್ಲದಿದ್ದಲೀ ಅವುಗಳಿಗೆ ಹುಳಗಳು ಬರುತ್ತವೆ ಎಂದರೆ ಸರಿ. ಉಪ್ಪಿನ ದ್ರಾವಣದಲ್ಲಿ ಅದ್ದಿ ಒಣಗಿಸಲಾಯಿತು ಎಂದು ಪಂಚನಾಮೆಯಲ್ಲಿ ಹೇಳಿಲ್ಲ. ನಾವು ರಾಸಾಯನಿಕ ಪರೀಕ್ಷೆ ಕಳುಹಿಸಿದ್ದೇವು ಎಂದು ಹೇಳುವ ಮಾದರಿಗಳನ್ನು ಉಪ್ಪಿನ ದ್ರಾವಣದಲ್ಲಿ ಅದ್ದಿ ಒಣಗಿಸಿರುತ್ತೇವೆ, ಅವುಗಳನ್ನು ಒಂದು ದಿನ ಉಪ್ಪಿನ ದ್ರಾವಣದಲ್ಲಿ ಅದ್ದಿ ಇಟ್ಟಿದ್ದೇವೆ. ಉಪ್ಪಿಗೆ

ಯಾವುದೇ ಒಂದು ವಸ್ತುವಿನ ಮೇಲೆ ಇರುವ ಕೆಮಿಕಲ್ ಅಥವಾ ಇನ್ನಿತರ ಪ್ರದಾರ್ಥಗಳು ಮತ್ತು ಕಲೆಗಳನ್ನು ಅದರಲ್ಲಿ ಅದ್ದಿಟ್ಟಾಗ ಹೀರಿಕೊಳ್ಳುವ ಶಕ್ತಿ ಇದ್ದೆ ಎಂದರೆ ಸರಿ. ಉಪ್ಪಿನ ದ್ರಾವಣದಲ್ಲಿ ಅದ್ದಿಟ್ಟ ಚರ್ಮ ಅವನ್ನು ಪ್ಯಾಕ್ ಮಾಡಿ ಇಟ್ಟಾಗ ಅದು ಬೆವರುತ್ತದೆ ಎಂದರೆ ಸರಿ. ಮು. ಮಾ. ನಂ . 6 ನ್ನು ಈಗ ನೋಡಿದಾಗ ಅದನ್ನು ಉಪ್ಪಿನ ದ್ರಾವಣದಲ್ಲಿ ಅದ್ದಿರುವುದು ಕಂಡು ಬರುವುದಿಲ್ಲ ಎಂದರೆ ಸರಿ. ಮು. ಮಾ. 5 ನ್ನು ಈಗ ನೋಡಿದಾಗ ಅದನ್ನು ಉಪ್ಪಿನ ಅಂಶ ಕಂಡು ಬರುತ್ತದೆ ಎಂದರೆ ಸರಿ. ಅದರಲ್ಲಿ ತೂತಿನ ಅಂಚುಗಳು ಕಪ್ಪಾಗಿವೆ ಎಂದರೆ ಸರಿ. ಮು. ಮಾ. 5 ಮತ್ತು 6 ನ್ನು ಈ ಪ್ರಕರಣಗಾಗಿ ಸೃಷ್ಟಿಸಿದ್ದು ಎಂದರೆ ಸರಿಯಲ್ಲ. ಮು. ಮಾ. 5 ರಿಂದ 9 ಆರೋಪಿಗಳಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ.

48. ಮು. ಮಾ. 1 ಮತ್ತು 2 ಮೊಬೈಲ್ ಗಳು ವಶಪಡಿಸಿಕೊಳ್ಳಲಾಯಿತು ಎಂದು ಹೇಳುವ ಸಂದರ್ಭದಲ್ಲಿ ಚಾಲನೆಯಲ್ಲಿತ್ತು. ಮು. ಮಾ. 1 ಮತ್ತು ಮು. ಮಾ . 2 ಕ್ಕೆ 4 ನೇ ಆರೋಪಿಯಿಂದ ಕರೆ ಬಂತ್ತು ಎಂದು ಪರಿಶೀಲಿಸಿಲ್ಲ. ಮು. ಮಾ. 1 ಮತ್ತು 2 ರ ನಡುವೆ ಕರೆ ವಿನಿಮಯ ಆಗಿರುವ ಬಗ್ಗೆ ಪರಿಶೀಲನೆ ಮಾಡಿಲ್ಲ. ಮು.1 ಮತ್ತು 2 ನ್ನು ನನ್ನ ಮೇಲಾಧಿಕಕಾರಿಗಳು ನನ್ನ ಸಮಕ್ಷಮ ಪರಿಶೀಲನೆ ಮಾಡಿದರು. ಆ ರೀತಿ ಮೇಲಾಧಿಕಾರಿಗಳು ಪರಿಶೀಲನೆ ಮಾಡಿ ಕರೆ ವಿನಿಮಯ ಖಾತ್ರಿ ಪಡಿಸಿದರು ಎಂದು ನನ್ನ ಹೇಳಿಕೆಯಲ್ಲಿ ನಾನು ಹೇಳಿಲ್ಲ. ಮು. ಮಾ. 3 ರಿಂದ 9 ಕ್ಕೂ ಆರೋಪಿಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ಮು. ಮಾ. 1 ಮತ್ತ 2 ರಲ್ಲಿ ಕರೆ ವಿನಿಮಯ ಹಾಗೂ 4 ನೇ ಪ್ರತಿವಾದಿಯ ಅವುಗಳಿಗೆ ಕರೆ ಬರದೆ ಇದ್ದರು ಕೂಡ ಅವುಗಳನ್ನು ಆರೋಪಿಗಳಿಂದ ಒಳ್ಳೆಯ ರೀತಿಯಲ್ಲಿ ಕಾರ್ಯಚರಣೆ ಮಾಡಿದ್ದೇವೆ ಎಂದು ಸುಳ್ಳಾಗಿ ತೋರಿಸಲು

ಅಮಾನತು ಪಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಕಡವೆ ಹಾಗೂ ಪ್ರತಿಯೊಂದು ಪ್ರಾಣಿಯು ಪ್ರಸವ ಸಂದರ್ಭದಲ್ಲಿ ಮೃತ ಪಡುವ ಸಂದರ್ಭ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರಾಣಿಗಳು ಪ್ರಸವ ಸಂದರ್ಭದಲ್ಲಿ ಮೃತ ಪಡುತ್ತದೆ ಎಂಬುದನ್ನು ನಾನು ತಿಳಿದುಕೊಂಡಿಲ್ಲ, ವನ್ಯ ಜೀವಿಗಳಿಗೆ ಸಂಬಂಧಪಟ್ಟಂತಹ ಪ್ರತ್ಯೇಕ ಪಠ್ಯ ಪುಸ್ತಕ ನಮಗೆ ಇರುತ್ತದೆ ಎಂದರೆ ಸರಿ.

49. ಅಡ್ಲೂರು, ಅಗಸೂರು, ಕಂಚಿನ ಬಾಗಿಲು ಮುಂತಾದ ಪ್ರದೇಶಗಳಲ್ಲಿ ಅವ್ಯಾಹತವಾಗಿ ಪ್ರಾಣಿಗಳ ಬೇಟೆ 2018 ರಿಂದ 2021 ಸಾಲಿನಲ್ಲಿ ನಡೆಯುತ್ತಿತ್ತು ಮತ್ತು ನಮ್ಮ ಇಲಾಖೆ ಆ ಬಗ್ಗೆ ಗೊತ್ತಿದ್ದು ನಿಷ್ಕ್ರಿಯವಾಗಿತ್ತು ಎಂದು ನ್ಯೂಸ್ ಪೇಪರಗಳಲ್ಲಿ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ವಿಚಾರ ನನಗೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ ಗೊತ್ತಿದ್ದು, ಗರ್ಭ ಧರಿಸಿ ಸತ್ತಿದ್ದ ಒಂದು ಕಡವೆಯನ್ನು ಉಪಯೋಗಿಸಿಕೊಂಡು ಮುಗ್ದ ಆರೋಪಿಗಳ ವಿರುದ್ದ ಈ ಸುಳ್ಳು ಪ್ರಕರಣ ದಾಖಲಿಸಿರುವುದು ಎಂದರೆ ಸರಿಯಲ್ಲ. ನಾಯ್ಯಾಲಯದ ಮುಂದೆ ಇರುವ ಕತ್ತಿ ಅಂಗಡಿಗಳಲ್ಲಿ ಮತ್ತು ಕಮ್ಮಾರರಲ್ಲಿ ಇರುತ್ತದೆ. ನಮ್ಮ ದಿನಗೂಲಿ ನೌಕರರಿಗೆ ಅಂತಹ ಕತ್ತಿಯನ್ನು ನಾವು ಕೊಡುತ್ತೇವೆ ಎಂದರೆ ಸರಿಯಲ್ಲ. ಅಂತಹ ಕತ್ತಿಯನ್ನು ರೆಂಬೆ ಕತ್ತರಿಸಲು ಹಾಗೂ ಗಿಡಗಳು ನೇರವಾಗಿ ಬೆಳೆಯಲು ಅದರ ಪಕ್ಕೆಗಳನ್ನು ಕತ್ತರಿಸಲು ನಾವು ಉಪಯೋಗಿಸುತ್ತೇವೆ ಎಂದರೆ ಸರಿಯಲ್ಲ. ಅಂತಹ ಕತ್ತಿಯನ್ನು ಉಪಯೋಗಿಸಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಹೊಸಕಂಬಿಯ ದಾಮೋದರ ಆಚಾರಿ ಎಂಬುವರು ಬಂದೂಕು ತಯಾರಿಸುವ ಲೈಸ್ಸ್ ನ್ಸ್ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಹಿಲ್ಲೂರಿನ ಮುರಳಿ ಆಚಾರಿ ಎಂಬುವರು ಕೂಡ ಆ ಬಗ್ಗೆ ಲೈಸ್‌ನ್ಸ್ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಮೋದರ ಆಚಾರಿಯವರು ಹೊಸಕಂಬಿ ಅರಣ್ಯ ತಪಾಸಣಾ ಗೇಟಿನ 10 ಪೂಟ್ ಅಂತರದಲ್ಲಿ

ಅವರ ಮನೆ ಮತ್ತು ವರ್ಕ್ ಶಾಪ್ ಇದೆ ಎಂದರೆ ನನಗೆ ಗೊತ್ತಿಲ್ಲ. ಆ ವರ್ಕ್ ಶಾಪ್ ಗೆ ಪೋಲಿಸ ಇಲಾಖೆಯಿಂದ ಹಾಗೂ ನಮ್ಮ ಅರಣ್ಯ ಇಲಾಖೆಯಿಂದ ಎಷ್ಟು ಬಂದುಕುಗಳನ್ನು ತಯಾರಿಸಿದರು ಎಂದು ಪರಿಶೀಲನೆಗೆ ಬೇಟಿ ಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರಿಬ್ಬರ ವರ್ಕ ಶಾಪ್ ಗಳಲ್ಲಿ ನ್ಯಾಯಾಲಯದ ಮುಂದೆ ಇರುವಂತಹ ಉಪಯೋಗಕ್ಕೆ ಇಲ್ಲದ ಬಂದೂಕು ಬಿದ್ದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಬಂದೂಕಿನಲ್ಲಿ ಖಾಲಿ ಇದ್ದು ಅದು ಚಾಲನಾ ಸ್ಥಿತಿಯಲ್ಲಿದ್ದಾಗ ಅದರ ಬ್ಯಾರಲ್ ನಳಿಗೆಯ ಮುಂದಿನ ಭಾಗದಲ್ಲಿ ಬಾಯಿಯಿಂದಗಾಳಿಯನ್ನು ಊದಿದರೆ ಟ್ರಿಗರ್ ಕೂತುಕೊಳ್ಳುವ ಜಾಗವನ್ನು ಒಪನ್ ಮಾಡಿದಾಗ ಆ ಗಾಳಿ ಸರಾಗವಾಗಿ ಬರಬೇಕು ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಬಂದೂಕಿನಲ್ಲಿ ಆ ರೀತಿ ಗಾಳಿ ಊದಿದಾಗ ಸರಾಗವಾಗಿ ಬರುವುದಿಲ್ಲ ಎಂದರೆ ಸಾಕ್ಷಿ ಅದನ್ನು ಊದಿ ನೋಡಿ ಪರೀಕ್ಷಿಸಿ ಬರುವುದಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದೆ ಇರುವ ಬಂದೂಕನ್ನು ನಾನಾಗಲೀ ನನ್ನ ಮೇಲಾಧಿಕಾರಿಗಳಾಲೀ ರಾಸಾಯನಿಕ ಪರೀಕ್ಷೆಗೆ ಕಳುಹಿಸುವಾಗ ಆ ರೀತಿ ಪರೀಕ್ಷಿಸಿಲ್ಲ ಹಾಗೂ ಆರೋಪಿಗಳ ವಿರುದ್ಧ ಪ್ರಕರಣ ಸೃಷ್ಟಿಸಲು ಈ ಬಂದೂಕನ್ನು ಸೃಷ್ಟಿಸಿ ಮಾಡಿಕೊಂಡದ್ದು ಎಂದರೆ ಸರಿಯಲ್ಲ. ಮು. ಮಾ. 3 ರಿಂದ 9 ನ್ನು ಆರೋಪಿಗಳನ್ನು ಹಿಡಿದೆವು ಎಂದು ಹೇಳುವ ಸಮಯದಲ್ಲಿ ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಂತರ ಅವುಗಳನ್ನು ರಸಾಯನಿಕ ಪರೀಕ್ಷೆಗೆ ಕಳುಹಿಸಲು ಒಂದು ಮಹಜರನ್ನು ಸೃಷ್ಟಿ ಮಾಡಿ ಅವುಗಳನ್ನು ಕೂಡ ಆ ಸಮಯ ದಲ್ಲಿ ಸೃಷ್ಟಿ ಮಾಡಿಕೊಂಡಿದ್ದು ಅಲ್ಲ. ಬಂದೂಕಿನ ಪರವಾನಿಗೆದಾರ ಮೃತ ಪಟ್ಟಾಗ ಆತನ ವಾರಸುದಾರರು ಅಂತಹ ಬಂದೂಕನ್ನು ಪೊಲೀಸಠಾಣೆಯಲ್ಲಿ ತಂದು ಸರಂಡರ್ ಮಾಡುತ್ತಾರೆ ಎಂದರೆ ಸರಿ. ಅಂತಹ ಬಂದೂಕುಗಳನ್ನು 3 ವರ್ಷದೊಳಗೆ ಅವರ ವಾರಸುದಾರರು ಕ್ಲೇಮ್ ಮಾಡದೇ

ಇದ್ದರೆ ಅದು ನಿಷ್ಪಯೋಜಕ ಎಂದು ಅಲ್ಲಿ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಂತಹ ನಿಷ್ಪಯೋಜಕ ಬಂದೂಕನ್ನು ಆರೋಪಿಗಳ ವಿರುದ್ಧ ಈ ಪ್ರಕರಣ ಸೃಷ್ಟಿಸಲು ಉಪಯೋಗಿಸುವುದು ಎಂದರೆ ಸರಿಯಲ್ಲ.

50. ನವಗದ್ದೆ ಅರಣ್ಯ ಸರ್ವೆ ನಂಬರ್ 26 ರಲ್ಲಿ ದಿನಾಂಕ 14-08-2020 ರಂದು 1 ನೇ ಆರೋಪಿ ಒಂದು ಕಡವೆಯನ್ನು ಗುಂಡಿಟ್ಟು ಕೊಂದು ಮಾಂಸವನ್ನು ತಯಾರಿಸಿ ಸಾಗಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದು ಎಂದು ಸುಳ್ಳು ಹೇಳುತ್ತಿರುತ್ತೇನೆಂದರೆ ಸರಿಯಲ್ಲ. ಅದೇ ರೀತಿ ಪಂಚರನ್ನು ಹಾಗೂ ಇಲಾಖಾ ಸಿಬ್ಬಂದಿಗಳನ್ನು ಇಲಾಖಾ ವಾಹನದಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ರಾಷ್ಟ್ರೀಯ ಹೆದ್ದಾರಿ ಕಾಲು ದಾರಿಯಲ್ಲಿ ಬೈಕ್ ನಿಂತಿದ್ದು , ಹಾಗೂ 2 ಆರೋಪಿಗಳು ಪ್ಲಾಸ್ಟಿಕ್ ಚೀಲದಲ್ಲಿ ಏನೋ ತರುತಿದ್ದರು, ನಮ್ಮನ್ನು ನೋಡಿ ಆ ಪ್ಲಾಸ್ಟಿಕ್ ಚೀಲವನ್ನು ಬಿಟ್ಟು ಓಡಿದರು, ನಾವು ಅವರನ್ನು ಬೆನ್ನಟ್ಟಿ ಹಿಡಿದ್ದಾಗ ಅ ಚೀಲದಲ್ಲಿ ಹಸಿ ಮಾಂಸ ಕಂಡು ಬಂತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅವರಿಬ್ಬರನ್ನು ಆ ಬೈಕ್ ಹತ್ತಿರ ಕರೆದುಕೊಂಡು ಬಂದಾಗ ಆ ಮಾಂಸ ಕಡವೆ ಮಾಂಸ ಎಂದರು ಹಾಗೂ ಆ ಕಡವೆಯುನ್ನು ನವಗದ್ದೆ ಅರಣ್ಯ ಪ್ರದೇಶದಲ್ಲಿ ಕೊಂದು ಮಾಂಸ ತಂದಿರುವುದು ಎಂದು ಸುಳ್ಳು ಹೇಳಿದರು ಎಂದರೆ ಸರಿಯಲ್ಲ. ಕಡವೆಯನ್ನು ಹೇಗೆ ಕೊಂದಿರುವುದು ನನಗೆ ಗೊತ್ತಿಲ್ಲ ಎಂದು 2 ನೇ ಆರೋಪಿ ಹೇಳಿದರು ಹಾಗೂ 3 ನೇ ಆರೋಪಿ 1 ವರೆ ಸಾವಿರಕ್ಕೆ ಕಡವೆ ಮಾಂಸ ಕೊಡಿಸಿದಾಗಿ ಬರಲು ತಿಳಿಸಿದ್ದರಿಂದ ಸ್ಥಳಕ್ಕೆ ಬಂದು ಒಟ್ಟು ಹಣ ಪಾವತಿಸಿದ್ದು 1 ನೇ ಆರೋಪಿಯಿಂದ ಆ ಮಾಂಸ ತಂದಿರುವುದಾಗಿ ಹಾಗೂ 3 ನೇ ಆರೋಪಿಗೆ ಆ ಕಡವೆ ಹೇಗೆ ಕೊಂದಿರುವುದು ಎಂದು ಗೊತ್ತು ಎಂದು ಸುಳ್ಳು ಹೇಳಿರುತ್ತೇನೆಂದರೆ ಸರಿಯಲ್ಲ.

51. ರಾತ್ರಿ ಹೊತ್ತಿನಲ್ಲಿ ಪ್ರಾಣಿಗೆ ಗುಂಡು ಹೊಡೆದಾಗ ಆ ಪ್ರಾಣಿಗೆ ಗುಂಡು ತಗಲಿದೆಯಾ ಎಂದು ಗುಂಡು ಹೊಡೆದವನಿಗೆ ಹಾಗೂ ಆತನ ಜೊತೆಯಲ್ಲಿದ್ದವರಿಗೆ ಗೊತ್ತಾಗುವುದಿಲ್ಲ ಎಂದರೆ ಸಾಕ್ಷಿ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ. ಗುಂಡು ತಗುಲಿದಾಗ ಅಂತಹ ಪ್ರಾಣಿ ಜೋರಾಗಿ ಓಡುತ್ತದೆ,, ಅಥವಾ ಚೀರಿಕೊಂಡು ಓಡುತ್ತದೆ ಅಥವಾ ಕುಂಟುತ್ತಾ ಓಡುತ್ತದೆ ಅಥವಾ ಅಲ್ಲೆ ಬೀಳುತ್ತದೆ. ತೊಡೆಯ ಭಾಗಕ್ಕೆ ಗುಂಡು ತಗುಲಿದಾಗ ಅಂತಹ ಪ್ರಾಣಿ ಜೋರಾಗಿ ಓಡಲು ಆಗುವುದಿಲ್ಲ ಎಂದರೆ ಸರಿ. ಆರೋಪಿಗಳು ಈ ಪ್ರಕರಣದಲ್ಲಿ ಕಡವೆ ಯಾವ ರೀತಿಯಾಗಿ ಓಡಿತ್ತು ಎಂದು ಹೇಳಿಲ್ಲ. ನಾನು ಕಡವೆಗೆ ಗುಂಡು ತಾಗಿದರೂ ಕೂಡಾ ಓಡಿ ಹೋಯಿತು ಎಂದು ನಾನು ಕಲ್ಪಿಸಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದು ಎಂದರೆ ಸರಿಯಲ್ಲ.

52. ನಂತರ ಸದರಿ ಹನುಮ ಜಟ್ಟು ಗೌಡರಿಗೆ ಕಡವೆಯನ್ನು ಕೊಂದ ಬಗ್ಗೆ ಕೇಳಲಾಗಿ, ತಾನು ಮತ್ತು 1 ನೇ ಆರೋಪಿ ಹಾಗೂ 5 ನೇ ಆರೋಪಿ ಸೇರಿ ದಿನಾಂಕ 13–08–2020 ರಂದು ರಾತ್ರಿ ಸುಮಾರು 9–00 ಘಂಟೆಗೆ 1 ನೇ ಆರೋಪಿಯ ಮನೆಯ ಸುತ್ತಲಿನ ಅರಣ್ಯ ಪ್ರದೇಶಕ್ಕೆ ಶಿಕಾರಿಗೆ ಹೋಗೋಣ ಎಂದು ನಿರ್ಧರಿಸಿ, ಟಾರ್ಚ್ ಮತ್ತು ಬಂದೂಕನ್ನು ತೆಗೆದುಕೊಂಡು ಅರಣ್ಯ ಪ್ರದೇಶಕ್ಕೆ ಹೋದೆವು ಎಂದು ತಿಳಿಸಿದರು ಹಾಗೂ 1 ನೇ ಆರೋಪಿ ಬಂದೂಕಿಗೆ ಸಿಡಿಮದ್ದನ್ನು ತುಂಬಿಕೊಂಡು ನಾವುಗಳು ಅರಣ್ಯ ಪ್ರದೇಶದಲ್ಲಿ ಕಾದು ಕುಳಿತುಕೊಂಡಿದ್ದಾಗ, ನಮ್ಮ ಹತ್ತಿರದಲ್ಲಿ ಒಂದು ಕಡವೆಯು ಹಾದು ಹೋಗುವುದನ್ನು ನೋಡಿ, 1 ನೇ ಆರೋಪಿ ಕಡವೆಗೆ ಗುಂಡಿಟ್ಟು ಹೊಡೆದರು ಎಂದು ತಿಳಿಸಿದರು ಮತ್ತು ಸದರಿ ಗುಂಡು ಕಡವೆಗೆ ತಾಗಿದರು ಕೂಡ ಅರಣ್ಯ ಪ್ರದೇಶದಲ್ಲಿ ಆ ಕಡವೆ ಓಡಿ ಹೋಯಿತು ಹಾಗೂ ಸದರಿ ಕಡವೆಗೆ ಮತ್ತೊಮ್ಮೆ ಗುಂಡಿಟ್ಟು ಹೊಡೆಯಲು ಮತ್ತೊಮ್ಮೆ ಬಂದೂಕಿಗೆ

ಸಿಡಿಮದ್ದನ್ನು ತುಂಬಿಕೊಂಡು ಸದರಿ ಕಡವೆಯನ್ನು ಹುಡುಕಿದಾಗ, ಅದು ಅಲ್ಲೆ ಸ್ವಲ್ಪ ದೂರದಲ್ಲಿ ಹಳ್ಳದ ಪಕ್ಕದಲ್ಲಿ ಬಿದ್ದುಕೊಂಡಿರುವುದು ಕಂಡುಬಂತು ಮತ್ತು ಹತ್ತಿರ ಹೋಗಿ ನೋಡಿದಾಗ ಕಡವೆ ಸತ್ತು ಹೋಗಿರುವುದನ್ನು ಖಾತ್ರಿ ಪಡಿಸಿಕೊಂಡೆವು ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈಗಾಗಲೆ ತುಂಬಾ ರಾತ್ರಿಯಾಗಿರುವುದರಿಂದ ಕಡವೆಯನ್ನು ಬೆಳಿಗ್ಗೆ ಕತ್ತರಿಸುವ ವಿಚಾರ ಮಾಡಿ ಕಡವೆಯನ್ನು ಕೊಲ್ಲಲು ಬಳಸಿದ ಬಂದೂಕನ್ನು ಅಲ್ಲೆ ಪಕ್ಕದಲ್ಲಿ ಇದ್ದ ಬಿ .ಡಿ.ಗೌಡರ ತೆಂಗಿನ ತೋಟದ ಮರದ ಬುಡದಲ್ಲಿ ಮುಚ್ಚಿಟ್ಟು 1 ನೇ ಆರೋಪಿಯ ಮನೆಗೆ ಹೋಗಿ ಮಲಗಿಕೊಂಡಿರುವುದಾಗಿ ತಿಳಿಸಿದರು ಮತ್ತು ಮುಂಜಾನೆ ಮೂವರು ಸೇರಿಕೊಂಡು ಕಡವೆ ಸತ್ತು ಬಿದ್ದಿದ್ದ ಸ್ಥಳಕ್ಕೆ ಹೋಗಿ ಬ್ಲೆಡ್ ಮತ್ತು ಕತ್ತಿಯ ಸಹಾಯದಿಂದ ಕಡವೆಯ ತಲೆ ಹಾಗೂ ಕಾಲುಗಳನ್ನು ಕತ್ತರಿಸಿ, ಚರ್ಮವನ್ನು ತೆಗೆದು ಮಾಂಸವನ್ನು ತಯಾರಿಸುವುದಾಗಿ ತಿಳಿಸಿದರು ಮತ್ತು ಕಡವೆಯ ಹೊಟ್ಟೆಯಲ್ಲಿ ಇದ್ದ ಮರಿಯನ್ನು ತೆಗೆದು ಉಳಿದ ಹೊಟ್ಟೆಯ ಭಾಗವನ್ನು ಹಳ್ಳಕ್ಕೆ ಎಸದಿದ್ದಾಗಿ ತಿಳಿಸಿದರು ಮತ್ತು ಕಡವೆಯ ಕಾಲುಗಳು, ಚರ್ಮ, ಕಡವೆಯ ಮರಿಯನ್ನು ಹಳ್ಳದ ನೀರಿನಲ್ಲಿ ಮುಳುಗಿಸಿಟ್ಟು ,ತಲೆಯನ್ನು ಮೇಲೆ ಬಿಟ್ಟಿರುತ್ತೇವೆ ಎಂದು ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರ ಸರಿಯಲ್ಲ.

53. ಮಾಂಸವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿರುತ್ತೇವೆ ಎಂದು ತಿಳಿಸಿದರು ಮತ್ತು ಕಡವೆಯನ್ನು ಸಾಯಿಸಲು ಬಳಸಿದ್ದ ಬಂದೂಕನ್ನು ನೀಡಿದ್ದ 4 ನೇ ಆರೋಪಿ ಮೊದಲೆ ಕಡವೆಯ ಮಾಂಸ ಬೇಕು ಎಂದು ತಿಳಿಸಿದ್ದರಿಂದ ಆತನಿಗೆ ದೂರವಾಣಿ ಮೂಲಕ ಸ್ಥಳಕ್ಕೆ ಬರಲು ತಿಳಿಸಿದಂತೆ, ಸ್ಥಳಕ್ಕೆ ಬಂದು ತನ್ನ ಪಾಲಿನ ಮಾಂಸವನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ತಿಳಿಸಿದರು ಮತ್ತು 1 ನೇ ಆರೋಪಿ ಆತನ ಪಾಲಿನ ಮಾಂಸವನ್ನು ಬೇಡವೆಂದು ತಿಳಿಸಿದ್ದರಿಂದ ತಾನು 2 ನೇ ಆರೋಪಿಗೆ ಕರೆ ಮಾಡಿ

ರೂ.1,500/- ಕ್ಕೆ ಕಡವೆ ಮಾಂಸವನ್ನು ಕೊಡಿಸುವುದಾಗಿ ಹೇಳಿ , 1 ನೇ ಆರೋಪಿಯ ಮನೆಗೆ ಹೋಗುವ ಕಾಲು ದಾರಿ ಬಳಿ ಬರಲು ತಿಳಿಸಿ, ತಾನು ಹಾಗೂ 1 ನೇ ಆರೋಪಿ ಮಾಂಸವನ್ನು ತೆಗೆದುಕೊಂಡು ಕಾಲುದಾರಿ ಕಡೆಗೆ ಹೊರೆಟೆವು ಹಾಗೂ ಸ್ವಲ್ಪ ಸಮಯದಲ್ಲಿ 2 ನೇ ಆರೋಪಿ ಅಲ್ಲಿಗೆ ಬಂದು 1 ನೇ ಆರೋಪಿಗೆ ರೂ .1,500/- ನೀಡಿ ಮಾಂಸವನ್ನು ತೆಗೆದುಕೊಂಡನು ಹಾಗೂ 1 ನೇ ಆರೋಪಿ ಹಣ ಪಡೆದು ಆತನ ಮನೆಗೆ ಹೊರಟನು ಎಂದು ತಿಳಿಸಿದರು ಹಾಗೂ ತಾನು ಮತ್ತು 2 ನೇ ಆರೋಪಿ ಮಾಂಸವನ್ನು ತೆಗೆದುಕೊಂಡು ಕಾಲುದಾರಿಯ ಮೂಲಕ ರಾಷ್ಟ್ರೀಯ ಹೆದ್ದಾರಿಗೆ ಬರುತ್ತಿರುವಾಗ ನಾವು ಬಂದು ಹಿಡಿದೆವು ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರ ಸರಿಯಲ್ಲ.

54. ನಾವು ಆ ಇಬ್ಬರು ಆರೋಪಿಗಳನ್ನು ದಸ್ತಗಿರಿ ಮಾಡಿ ಅವರು ತಂದಿದ್ದ ಪ್ಲಾಸ್ಟಿಕ್ ಚೀಲದಲ್ಲಿ ಇದ್ದ ಸುಮಾರು 7 ಕೆ.ಜಿ ಯಷ್ಟು ಮಾಂಸ, ಮೋಟಾರ ಬೈಕ್ ಕೆ ಎ 30-ಆರ್ 3537 ಹಾಗೂ ಅವರ ಬಳಿ ಇದ್ದ ಎರಡು ಮೊಬೈಲ್‌ಗಳನ್ನು ಜಪ್ತು ಪಡಿಸಿಕೊಂಡೆವು ಮತ್ತು ಮಧ್ಯಾಹ್ನ 2-00 ರಿಂದ 3-00 ರ ತನಕ ಸ್ಥಳದಲ್ಲಿ ಪಂಚನಾಮೆ ಕ್ರಮಜರುಗಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರ ಸರಿಯಲ್ಲ. ಮೊಬೈಲಗಳು ಹಾಗೂ ಮೋಟಾರ ಬೈಕ್ನು ನಮ್ಮ ಕಚೇರಿಯಲ್ಲಿ ಆರೋಪಿಗಳಿಂದ ಸುಳ್ಳಾಗಿ ವಶಪಡಿಸಿಕೊಂಡ್ಡವೆ ಎಂದರೆ ಸರಿಯಲ್ಲ. ಪ್ಲಾಸ್ಟಿಕ್ ಚೀಲ್ ಹಾಗೂ ನಾನು ಹೇಳುವ 7 ಕೆ ಜಿ ಮಾಂಸವನ್ನು ಸೃಷ್ಟಿಸಿಕೊಂಡದ್ದು ಎಂದರೆ ಸರಿಯಲ್ಲ. ನಿಪಿ-2 ರಿಂದ 6 ನ್ನು ಕೂಡ ಸೃಷ್ಟಿಸಿಕೊಂಡದ್ದು ಎಂದರೆ ಸರಿಯಲ್ಲ. ಪೋಟೋ ತೆಗೆಯಲು ಕ್ಯಾಮರ್ ವನ್ನು ಎಷ್ಟು ಹೊತ್ತು ಉಪಯೋಗಿಸಲಾಗಿದೆ ಎಂಬ ಬಗ್ಗೆ ಸಮಯವನ್ನು ಹೇಳಲಾಗುವುದಿಲ್ಲ. ಸದರಿ ನಿಪಿ-6 ಎಷ್ಟು ಹೊತ್ತು ಎಷ್ಟು ಸಮಯ

ರೇಕಾರ್ಡ ಆಗಿದೆ ಎಂದು ಹೇಳಲು ಅಗುವುದಿಲ್ಲ. ನಿಪಿ-2 ರಿಂದ 6 ನ್ನು ನನ್ನ ಸಮಕ್ಷಮ ಆರೋಪಿಗಳ ಸಮಕ್ಷಮದಲ್ಲಾಗಲೀ ಹಾಗೂ ನಾನು ಹೇಳುವಂತಹ ಸ್ಥಳದಲ್ಲಿ ಆಗಲೀ ತೆಗೆದದ್ದು ಅಲ್ಲ ಎಂದರೆ ಸರಿಯಲ್ಲ. ಆರೋಪಿಗಳನ್ನು ಸ್ಥಳದಲ್ಲಿ ಹಿಡಿದದ್ದು ಅಲ್ಲ ಹಾಗು ನಮ್ಮ ಇಲಾಖಗೆ ಕರೆಯಿಸಿ ಬಂದಿಸಿದ್ದು ಎಂದರೆ ಸರಿಯಲ್ಲ. ಆರೋಪಿಗಳಿಬ್ಬರನ್ನು ಭದ್ರತೆಗಾಗಿ ಕಚೇರಿಯಲ್ಲಿ ತಂದು ಇಟ್ಟೆವು ಎಂದು ನನ್ನ ಹೇಳಿಕೆಯಲ್ಲಿ ಹಾಗೂ ಮಹಜರಿನಲ್ಲಿ ಹೇಳಿಲ್ಲ ಹಾಗೂ ನ್ಯಾಯಲಯದಲ್ಲಿ ಪ್ರಥಮವಾಗಿ ಆರೀತಿ ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ.

55. ಅದೇ ದಿನ 1 ನೇ ಆರೋಪಿ ವಿಚಾರಣೆಗಾಗಿ ನಾನು ಹಾಗೂ ಚಾ.ಸಾ.2, ಚಾ.ಸಾ.3 ಹಾಗೂ ಚಾ.ಸಾ.5 ರಿಂದ ಚಾ.ಸಾ.7 ರವರ ಜೊತೆ ಮೇಲೆ ಹೇಳಿದಂತ ಕಾಲುದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದೆವು ಮತ್ತು ಆ ರೀತಿ ಹೋಗುತ್ತಿದ್ದಾಗ ಒಂದು ಹಳ್ಳದ ಪಕ್ಕದ ಕಲ್ಲುಬಂಡೆಯ ಮೇಲೆ ಒಬ್ಬ ವ್ಯಕ್ತಿ ಮಲಗಿಕೊಂಡಿರುವುದು ಕಂಡುಬಂತು ಹಾಗೂ ನಂತರ ಪಂಚರು ಆ ಮಲಗಿರುವ ವ್ಯಕ್ತಿಯನ್ನು ಗಮನಿಸಿ 1 ನೇ ಆರೋಪಿ ಎಂದು ತಿಳಿಸಿದರು ಹಾಗೂ ಆತನ ಹತ್ತಿರ ಹೋಗಿ ಕಡವೆಯನ್ನು ಕೊಂದ ಬಗ್ಗೆ ವಿಚಾರಿಸಲಾಗಿ, ತಾನೆ ಕಡವೆಯನ್ನು ಕೊಂದಿರುವುದಾಗಿ ಒಪ್ಪಿಕೊಂಡಿರುತ್ತಾರೆ ಹಾಗೂ ನಂತರ ಕಡವೆಯನ್ನು ಕೊಂದ ಸ್ಥಳವನ್ನು ತೋರಿಸಲು ಕೇಳಲಾಗಿ, ಅವರು ನಮ್ಮನ್ನು ಸುಮಾರು 100 ಮೀಟರ್ ದೂರದಲ್ಲಿದ್ದ ಒಂದು ಹಳ್ಳದ ಹತ್ತಿರ ಕರೆದುಕೊಂಡು ಹೋಗಿ, ಅದೇ ಸ್ಥಳದಲ್ಲಿ ಕಡವೆ ಸತ್ತು ಬಿದ್ದಿರುವುದು ಹಾಗೂ ಅದೇ ಸ್ಥಳದಲ್ಲಿ ತಾನು ಹಾಗೂ 3 ಮತ್ತು 5 ನೇ ಆರೋಪಿ ಸೇರಿ ಸದರಿ ಕಡವೆಯನ್ನು ಕತ್ತರಿಸಿರುವುದಾಗಿ ತಿಳಿಸಿದರು ಹಾಗೂ ಅಲ್ಲೆ ಪಕ್ಕದಲ್ಲಿ ಬಿದ್ದಿದ್ದ ಕತ್ತರಿಸಿದ ಕಡವೆಯ ತಲೆಯನ್ನು ತೋರಿಸಿದರು ಹಾಗೂ ಅಲ್ಲೆ ಪಕ್ಕದ ಹಳ್ಳದ ನೀರಿನಲ್ಲಿ

ಮುಳುಗಿಸಿಟ್ಟಿದ್ದ ಕಡವೆಯ ಕಾಲುಗಳು, ಚರ್ಮ ಹಾಗೂ ಅದರ ಹೊಟ್ಟೆಯಲ್ಲಿ ಇದ್ದ ಮರಿಯನ್ನು ಒಂದೊಂದಾಗಿ ತೆಗೆದು ತೋರಿಸಿದರು,ಹಾಗೂ ಅದೇ ಸ್ಥಳದಿಂದ 4 ನೇ ಆರೋಪಿ ಕಡವೆಯ ಮಾಂಸವನ್ನು ತೆಗೆದುಕೊಂಡು ಹೋಗಿರುವುದಾಗಿ ತಿಳಿಸಿದರು, ಮತ್ತು ಬಂದೂಕಿನ ಬಗ್ಗೆ ಕೇಳಲಾಗಿ, ಅಲ್ಲೆ ಪಕ್ಕದಲ್ಲಿ ಇದ್ದ ಬಿ.ಡಿ.ಗೌಡರ ತೆಂಗಿನ ತೋಟಕ್ಕೆ ಕರೆದುಕೊಂಡು ಹೋಗಿ , ತೆಂಗಿನ ಮರದ ಬುಡದಲ್ಲಿ ಬಚ್ಚಿಟ್ಟಿದ್ದ ಬಂದೂಕನ್ನು ತೋರಿಸಿದರು ಎಂದು ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ. ನಂತರ ಸಹಾಯಕ ನಿರ್ದೇಶಕರು, ಪಶುಸಂಗೋಪನೆ ಮತ್ತು ಪಶು ವೈದ್ಯ ಆಸ್ಪತ್ರೆ,ಅಂಕೋಲಾ ರವರನ್ನು ಸ್ಥಳಕ್ಕೆ ಕರೆಯಿಸಿ ಕಡವೆಗೆ ಗುಂಡು ತಗಲಿದ ಚರ್ಮದ ಭಾಗ ಹಾಗೂ ಕಡವೆಯ ಚರ್ಮ ಹಾಗೂ ಮಾಂಸದ ಸ್ಯಾಂಪಲ್‌ಗಳನ್ನು ತೆಗೆಯಲಾಯಿತು, ಮತ್ತು 1 ನೇ ಆರೋಪಿಯನ್ನು ದಸ್ತಗಿರಿ ಮಾಡಲಾಯಿತು, ಮತ್ತು ಸ್ಥಳದಲ್ಲಿ ಇದ್ದ ಕಡವೆಯ ತಲೆ, ಚರ್ಮ, ನಾಲ್ಕು ಕಾಲುಗಳು, ಬಂದೂಕು ಹಾಗೂ ಕತ್ತಿಯನ್ನು ಜಪ್ತು ಪಡಿಸಲಾಯಿತು, ಮತ್ತು ಸಂಜೆ 4-30 ಯಿಂದ 6-00 ರ ತನಕ ಪಂಚನಾಮ ಕ್ರಮ ಜರುಗಿಸಿ, ಪೋಟೊಗಳನ್ನು ಹಾಗೂ ವೀಡಿಯೊವನ್ನು ತೆಗೆಯಲಾಯಿತು, ಮತ್ತು ಪಂಚನಾಮೆಯನ್ನು ನಾನೆ ಬರೆದಿರುತ್ತೇನೆ ಎಂದು ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ. ಆ ಭಾಗದಲ್ಲಿ ಗುಂಡು ತಾಗಿರುವ ತೂತು ಕಾಣುತ್ತದೆ. 1 ನೇ ಆರೋಪಿಯ ಜೊತೆ ಜಪ್ತು ಪಡಿಸಿದ ಸ್ವತ್ತುಗಳ ಜೊತೆ ತೆಗೆದುಕೊಂಡು ಬಂದು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಲಾಯಿತು, ಮತ್ತು ಆರೋಪಿಗಳ ಮತ್ತು ಜಪ್ತು ಪಡಿಸಿದ ಸ್ವತ್ತುಗಳ ಪೋಟೊವನ್ನು ತೆಗೆಯಲಾಯಿತು, ಮತ್ತು ನಂತರ ನ್ಯಾಯಾಲಯದಲ್ಲಿ ದೂರನ್ನು ಸಲ್ಲಿಸಿ ಆರೋಪಿಗಳನ್ನು ನ್ಯಾಯಾಲಯಕ್ಕೆ ಸೂಕ್ತ ಬಂದೂಬಸ್ತಿನಲ್ಲಿ ಮುಂದಿನ ಕ್ರಮಕ್ಕಾಗಿ ಹಾಜರು ಪಡಿಸಲಾಯಿತು ಎಂದು ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ.

56. ದಿನಾಂಕ 15-08-2020 ರಂದು 4 ಮತ್ತು 5 ನೇ ಆರೋಪಿಗಳ ವಿಚಾರಣೆಗಾಗಿ ಸರ್ಚ್ ವಾರೆಂಟಗಳನ್ನು ಮೇಲಾಧಿಕಾರಿಯಿಂದ ಪಡೆದುಕೊಂಡಿರುತ್ತೇನೆ, ಮತ್ತು ಅವರಿಬ್ಬರ ಮನೆಗೆ ಹೋಗಿ ತಲಾಷು ಮಾಡಲಾಗಿ ಅವರಿಬ್ಬರು ಮನೆಯಲ್ಲಿ ಪತ್ತೆಯಾಗಿರುವುದಿಲ್ಲ, ಮತ್ತು ದಿನಾಂಕ 17-08-2020 ರಂದು ಈ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡಿದ್ದ ಕಡವೆಯ ದೇಹದ ಭಾಗಗಳು ಕೊಳೆತು ಹಾಳಾಗುವುದರಿಂದ ಅವುಗಳ ಸೂಕ್ತ ವಿಲೆವಾರಿಗಾಗಿ ಈ ನ್ಯಾಯಾಲಯದ ಅನುಮತಿ ಪಡೆದು ಅವುಗಳನ್ನು ಅಂಕೋಲಾ ವಲಯ ಕಚೇರಿಯಲ್ಲಿ ಕಟ್ಟಿಗೆಯಿಂದ ಸುಟ್ಟು ಹಾಕಲಾಯಿತು, ಮತ್ತು ಆ ಸಮಯದಲ್ಲಿ ಛಾಯ ಚಿತ್ರ, ವೀಡಿಯೊ ಹಾಗೂ ಪಂಚನಾಮೆಯನ್ನು ಮಾಡಲಾಯಿತು, ಮತ್ತು ಆ ಪಂಚನಾಮೆಯನ್ನು ನಾನೆ ಬರೆದಿರುತ್ತೇನೆ ಎಂದು ಸುಳ್ಳು ಹೇಳಿದಿದೆನೆಂದರೆ ಸರಿಯಲ್ಲ. ದಿನಾಂಕ 29-09-2020 ರಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ ಆವರಣದಲ್ಲಿ ಈ ಪ್ರಕರಣದಲ್ಲಿ ಜಪ್ತು ಪಡಿಸಿದ ಬಂದೂಕು ಮತ್ತು ಮದ್ದು ಗುಂಡು ತುಂಬಿಕೊಂಡು ಲೊಡೆಡ್ ಆಗಿದ್ದರಿಂದ ಅದನ್ನು ಅನ್ ಲೋಡ್ ಮಾಡಲು ಜಿಲ್ಲಾ ಶಸ್ತ್ರಾಸ್ತ್ರ ಮಿಸಲು ಪಡೆಯ ಸಿಬ್ಬಂದಿಯಾದ ಚಾ.ಸಾ.9 ರವರು ಸ್ಥಳಕ್ಕೆ ಬಂದಿದ್ದರು, ಮತ್ತು ಅವರ ಮೂಲಕ ಆ ಬಂದೂಕನ್ನು ಅನ್‌ಲೋಡ್ ಮಾಡಿ ಅದರಲ್ಲಿದ್ದ 4 ಸೀಸದ ಗುಂಡುಗಳು ಹಾಗೂ 5 ಗ್ರಾಂ ನಷ್ಟು ಗನ್ ಪೌಡರ್ ನ್ನು ಹೊರತೆಗೆದು ವಲಯ ಅರಣ್ಯಾಧಿಕಾರಿ ವಶಕ್ಕೆ ನೀಡಲಾಯಿತು, ಮತ್ತು ಈ ಬಗ್ಗೆ ಛಾಯಾ ಚಿತ್ರ ತೆಗೆದು ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಲಾಯಿತು, ಮತ್ತು ದಿನಾಂಕ 07-11-2020 ರಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ, ಅಂಕೋಲಾದಲ್ಲಿ ಜಪ್ತು ಪಡಿಸಿಕೊಂಡ ಮಾದರಿ ಗುಂಡು ತಗುಲಿದ

ಚರ್ಮ, ಇನ್ನೊಂದು ಮಾದರಿ ಚರ್ಮ ಹಾಗೂ ಬಂದೂಕು ಹಾಗೂ 4 ಸೀಸದ ಗುಂಡುಗಳು ಹಾಗೂ ಗನ್ ಪೌಡರ್ ಮತ್ತು ಆರೋಪಿಗಳ ಉಗುರುಗಳ ಮಾದರಿಗಳನ್ನು ಸರಕಾರಿ ವಿಧಿವಿಜ್ಞಾನ ಪ್ರಯೋಗಾಲಯ, ಮಡಿವಾಳ, ಬೆಂಗಳೂರಿಗೆ ಕಳುಹಿಸಲು ಅವುಗಳನ್ನು ಆರಟಿಕಲ್ 1 ರಿಂದ 7 ಎಂದು ನಮೂದಿಸಿ, ಬಿಳಿ ಬಟ್ಟೆಯಿಂದ ಸುತ್ತಿ, ಅರಗು ಹಚ್ಚಿ, ಆರ್ ಎಫ್ ಒ, ಅಂಕೋಲಾ ಎಂದು ಮೊಹರು ಮಾಡಿ ಪ್ಯಾಕ್ ಮಾಡಿ ಪಂಚರು ಹಾಗೂ ನಾವೆಲ್ಲಾ ಸಹಿ ಮಾಡಿರುತ್ತೇವೆ, ಮತ್ತು ಆ ಬಗ್ಗೆ ಪಂಚನಾಮೆಯನ್ನು ಕೂಡ ಜರುಗಿಸಲಾಯಿತು ಎಂದು ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ. 5 ಗ್ರಾಂ ನಷ್ಟು ಪೌಡರ ಹಾಗೂ 4 ಸೀಸದ ಗುಂಡುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುವುದು ಎಂದರೆ ಸರಿಯಲ್ಲ. ಆ ಬಗ್ಗೆ ಕಡತದಲ್ಲಿ ಪಂಚನಾಮೆ ಮಾಡಿದ್ದೇ ಇರುವುದಿಲ್ಲ ಹಾಗಾಗೀ ಮೂಲ ಪಂಚನಾಮೆ ಇರುವುದಿಲ್ಲ ಎಂದರೆ ಸರಿಯಲ್ಲ. ಮದ್ದು ಮತ್ತು ಗುಂಡುಗಳನ್ನು ವಿಲೇವಾರಿ ಮಾಡಲು ನ್ಯಾಯಾಲಯದ ಅನುಮತಿ ಪಡೆದಿಲ್ಲ. ರಾಸಾಯನಿಕ ಪರೀಕ್ಷೆ ಕಳುಹಿಸಿದೇವು ಎಂದು ಹೇಳುವ ಮದ್ದು ಮತ್ತು ಗುಂಡು ನಮ್ಮ ಇಲಾಖೆ ವಾಪಸ್ಸು ಬಂದಿರುವ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ವಾಪಸ್ಸು ಬಂದಿಲ್ಲ ಎಂದು ನುಡಿಯುತ್ತಾರೆ. ನಾವು ಕಳುಹಿಸಿಸದೇ ಇದ್ದುದರಿಂದ ವಾಪಸ್ಸು ಬಂದಿರುವುದಿಲ್ಲ ಹಾಗೂ ಆ ರೀತಿ ಕಟ್ಟು ಕತೆ ಕಟ್ಟಿದೆನೆಂದರೆ ಸರಿಯಲ್ಲ. ಮೇಲೆ ಹೇಳಿದಂತಹ ಮು. ಮಾ. ಗಳ ರಾಸಾಯನಿಕ ವರದಿ ಪಡೆಯಲು ನಾವು ಹಾಗೂ ನಮ್ಮ ಮೇಲಧಿಕಾರಿ ಪ್ರಭಾವ ಬೀರಿ ಪಡೆದಕೊಂಡಿರುವುದು ಎಂದರೆ ಸರಿಯಲ್ಲ. ಮು. ಮಾ. ಗಳ ಮೇಲೆ ಅಂಟಿಸಲಾಗಿದೆ ಎಂದು ಹೇಳುವ ಚೀಟಿಗಳು ನಮ್ಮ ಇಲಾಖಾ ಸಿಬ್ಬಂದಿಗಳು ಉಪಯೋಗಿಸಿ ಸೃಷ್ಟಿಸಿದ ಚೀಟಿಗಳು ಎಂದರೆ ಸರಿಯಲ್ಲ. ಸದರಿ ಮಾದರಿ ಆರಟಿಕಲ್ 1 ರಿಂದ 7 ನ್ನು ಎಫ್ ಎಸ್ ಎಲ್, ಬೆಂಗಳೂರಿಗೆ ನಾನೆ ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇನೆ, ಮತ್ತು

ಸಿ.ಸಿ.ನಂ.17/2022
ಪಿ.ಡಬ್ಲ್ಯೂ-1
ಸಿ.ಡಬ್ಲ್ಯೂ-1

ಆರಟಿಕಲ್ 4 ಅಂದರೆ ಸೀಸದ ಗುಂಡುಗಳು ಹಾಗೂ ಗನ್ ಪೌಡರ ನ್ನು ಹೊರತು ಪಡಿಸಿ ಉಳಿದ ಆರಟಿಕಲ್‌ನ್ನು ಪರೀಕ್ಷೆಯ ನಂತರ ತಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅಂಕೋಲಾ ರವರಿಗೆ ಒಪ್ಪಿಸಿರುತ್ತೇನೆ, ಮತ್ತು ಈ ಬಗ್ಗೆ ತನಿಖಾಧಿಕಾರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳಿದ್ದೆನೆಂದರೆ ಸರಿಯಲ್ಲ. ನಾನೇ ಸೃಷ್ಟಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
**ಅಂಕೋಲಾ.**